"SEPTEMBER 2023 Makeup SEE"

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/05/ಇಎಪಿ/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
Email:dte.commissioner@gmail.com
ದಿನಾಂಕ: 19.08.2023

## ಜ್ಞಾಪನ

ವಿಷಯ: 2020-21ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ರ ಪಠ್ಯಕ್ರಮದಲ್ಲಿ ಪ್ರವೇಶ ಪಡೆದು 1 ರಿಂದ 6ನೇ ಸೆಮಿಸ್ಟರ್‌ಗಳಲ್ಲಿ ಅನುತ್ತೀರ್ಣಗೊಂಡಿರುವ ಮತ್ತು Makeup CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಪಡೆದಿರುವ (ಥಿಯರಿ ಹಾಗೂ ಪ್ರಾಯೋಗಿಕ ವಿಷಯಗಳಲ್ಲಿ) ವಿದ್ಯಾರ್ಥಿಗಳು Makeup ಪರೀಕ್ಷೆಗೆ ನೋಂದಾಯಿಸುವ ಬಗ್ಗೆ.

ಉಲ್ಲೇಖ: 1)ಸರ್ಕಾರಿ ಆದೇಶ ಸಂಖ್ಯೆ: ಇಡಿ11 ಟಿಪಿಇ 2007 ಬೆಂಗಳೂರು ದಿನಾಂಕ:03.12.2007
2)ಸರ್ಕಾರಿ ಆದೇಶ ಸಂಖ್ಯೆ:ಇಡಿ 172 ಡಿಟಿಇ 2020 ದಿನಾಂಕ:22.12.2020
3)ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/5/ಇಸಿಎಸ್(1)/2023 ದಿನಾಂಕ:17.07.2023
4)ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/5/ಇಸಿಎಸ್(1)/2023 ದಿನಾಂಕ:20.07.2023
5)ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/05/ಇಎಪಿ/2023 ದಿನಾಂಕ:18.08.2023

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ ಸರ್ಕಾರವು 2020-21ನೇ ಸಾಲಿನಿಂದ ಪ್ರೋಗ್ರಾಮ್‌ಗಳ ಪಠ್ಯಕ್ರಮವನ್ನು ಪರಿಷ್ಕರಿಸಿ ಆದೇಶಿಸಿದೆ. ಸರ್ಕಾರಿ ಆದೇಶಕ್ಕೆ ಲಗತ್ತಿಸಿರುವ 2020 ರ ಪರಿಷ್ಕೃತ ಪಠ್ಯಕ್ರಮದ ಡಿಪ್ಲೋಮ ಪ್ರೋಗ್ರಾಮ್‌ಗಳ ನಿಯಮಾವಳಿಗಳ ಕಂಡಿಕೆ 14 ಉಪ ಕಂಡಿಕೆ 14.2 ಗಳನ್ವಯ 1 ರಿಂದ 6ನೇ ಸೆಮಿಸ್ಟರ್‌ಗಳ ವಿವಿಧ ಥಿಯರಿ ಹಾಗೂ ಪ್ರಾಯೋಗಿಕ ಕೋರ್ಸ್ (Subjects) ಗಳಲ್ಲಿ ಅನುತ್ತೀರ್ಣಗೊಂಡಿರುವ & ಉಲ್ಲೇಖ (3) ರ ಸುತ್ತೋಲೆಯನ್ವಯ ಸಿ-20 ಪಠ್ಯಕ್ರಮದ 2020-21ನೇ, 2021-22ನೇ ಹಾಗೂ 2022-23ನೇ ಶೈಕ್ಷಣಿಕ ಸಾಲುಗಳಲ್ಲಿ ಶೇಕಡಾ 40 ಕ್ಕಿಂತ ಕಡಿಮೆ CIE ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ (NE Students) ಈಗಾಗಲೇ ನಿಗದಿ ಪಡಿಸಿರುವ ಅವಧಿಗಳಲ್ಲಿ Makeup ತರಗತಿಗಳನ್ನು ನಡೆಸಿ ಹಾಗೂ Makeup CIE ಕಿರು ಪರೀಕ್ಷೆಗಳನ್ನು ಜರುಗಿಸಿ ಸದರಿ ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು (CIE) ಗಳಿಸಿ ಅಂತಿಮ ಪರೀಕ್ಷೆಗೆ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳು ದಿನಾಂಕ:04.09.2023 ರಿಂದ 20.09.2023 ರವರೆಗೆ ನಡೆಸಲಾಗುವ Makeup ಪ್ರಾಯೋಗಿಕ ಮತ್ತು ಥಿಯರಿ ಪರೀಕ್ಷೆ (SEE) ತೆಗೆದುಕೊಳ್ಳಲು ಇಚ್ಚಿಸಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ದಿನಾಂಕ:28.08.2023ರೊಳಗೆ ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ.

ಸೆಪ್ಟೆಂಬರ್ 2023 Makeup (SEE) ಪರೀಕ್ಷೆಗೆ ನೋಂದಾಯಿಸುವ ವಿದ್ಯಾರ್ಥಿಗಳಿಂದ ನಿಗದಿತ ಸೆಪ್ಟೆಂಬರ್ 2023 Makeup Exam ಅರ್ಜಿ ನಮೂನೆಯೊಂದಿಗೆ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಪಡೆಯತಕ್ಕದ್ದೆಂದು ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ.

1. ಪ್ರತಿ ಸೆಮಿಸ್ಟರ್‌ನ ಒಂದು ವಿಷಯಕ್ಕೆ ರೂ.200+ರೂ.50 ಅಂಕಪಟ್ಟಿ ಶುಲ್ಕ
2. ಪ್ರತಿ ಸೆಮಿಸ್ಟರ್‌ನ ಎರಡು ವಿಷಯಗಳಿಗೆ ರೂ.200+ರೂ.50 ಅಂಕಪಟ್ಟಿ ಶುಲ್ಕ
3. ಪ್ರತಿ ಸೆಮಿಸ್ಟರ್‌ನ ಮೂರು/ ಹೆಚ್ಚು ವಿಷಯಗಳಿಗೆ ರೂ.300+ರೂ.50 ಅಂಕಪಟ್ಟಿ ಶುಲ್ಕ

ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳು ಪ್ರತಿ ವಿದ್ಯಾರ್ಥಿಯು ಪರೀಕ್ಷಾ ಶುಲ್ಕವನ್ನು K2 ಮುಖಾಂತರ ಸರ್ಕಾರಿ ಖಜಾನೆಗೆ ಲೆಕ್ಕ ಶೀರ್ಷಿಕೆ (0202-02-101-0-01) ಗೆ ಜಮಾ ಮಾಡುವ ಬಗ್ಗೆ ನಿಗಾವಹಿಸಿ ಕ್ರಮಕೈಗೊಳ್ಳುವುದು.

ಸೆಪ್ಟೆಂಬರ್ 2023 Makeup (SEE) ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಗೆ ಹಾಜರಾಗಲು ಅನುಮತಿ ನೀಡಿ Makeup Exam ಫಲಿತಾಂಶ ಪ್ರಕಟಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನು ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗುತ್ತದೆ.

ಸೆಪ್ಟೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ Makeup (SEE) ಪರೀಕ್ಷೆ ತೆಗೆದುಕೊಳ್ಳಲು ಪರೀಕ್ಷಾ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳ ವಿವರಗಳನ್ನು ಕೂಡಲೇ BTE Linx ಆನ್‌ಲೈನ್ ವೆಬ್‌ಪೋರ್ಟಲ್‌ನಲ್ಲಿ ಇರುವಂತಹ ಕ್ಯಾಂಡಿಡೇಟ್ ಲಿಸ್ಟ್‌ನಲ್ಲಿ K2 ಮುಖಾಂತರ ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ ನಮೂದಿಸಿರುವ ಆಧಾರದ ಮೇಲೆ Update ಮಾಡಬೇಕಾಗಿರುತ್ತದೆ.

**ವಿಶೇಷ ಸೂಚನೆ: ಉಲ್ಲೇಖ (5) ರ ಜ್ಞಾಪನದಲ್ಲಿನ ನವೆಂಬರ್/ಡಿಸೆಂಬರ್ 2023 ರ ಪರೀಕ್ಷಾ ಶುಲ್ಕವನ್ನು ಹಾಗೂ ಸೆಪ್ಟೆಂಬರ್ 2023 ರ Makeup ಪರೀಕ್ಷಾ ಶುಲ್ಕಗಳನ್ನು ಪ್ರತ್ಯೇಕವಾಗಿ ಪಾವತಿಸುವುದು.**

ದಿನಾಂಕ:04.09.2023 ರಿಂದ 20.09.2023 ರವರೆಗೆ Makeup ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದೆಂದು ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.

ಕಾರ್ಯದರ್ಶಿ

19/8/23

ಇವರಿಗೆ,

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ

ಪ್ರತಿ:
1. ಆಯುಕ್ತರ ಆಪ್ತಶಾಖೆ – ಅವಗಾಹನೆಗಾಗಿ
2. ನಿರ್ದೇಶಕರ ಆಪ್ತಶಾಖೆ – ಅವಗಾಹನೆಗಾಗಿ
3. ಕಾರ್ಯದರ್ಶಿಗಳ ಆಪ್ತಶಾಖೆ
4. ಉಪ ನಿರ್ದೇಶಕರು (ಪರೀಕ್ಷೆ)
5. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
6. ಇಸಿಎಸ್/ಇಎಫ್ ಎಸ್/ಇಆರ್‌ಎಸ್ ಮುಂದಿನ ಕ್ರಮಕ್ಕಾಗಿ
7. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ರಿಜಿಸ್ಟ್ರಾರ್ (ಪರೀಕ್ಷೆ)
9. ಅಧೀಕ್ಷಕರು (ಆರ್‌ಡಿಎಂ (1) ರಿಂದ (15))
10. ಗಣಕ ಕೇಂದ್ರ -ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
11. ಕಛೇರಿ ಪ್ರತಿ